Regd No M 1229 | 43rd Year | Sri 'Satyavadi' Mysore | 26—2—1959

ಸ್ವಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಬುಜೆ ಸಿಂಸ್ಕೇದಾರ್ ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿಗೆ ೨ ನೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಕಾಂಗ್ರೆಸಿಗೆ ಆಚಾರ್ಯ ರಂಗಾರವರ ರಾಜೀನಾಮೆ

ಸುಂಕ ನಜವಿಲ್ಲ

ಬೆಂಗಳೂರು— ಮೈಸೂರು ಆಟೊಮೊಬೈಲ್ ಪಾರ್ಟ್ಸ್ ಮತ್ತು ಅಲೈಡ್ ಮರ್ಚೆಂಟ್ಸ್ ಅಸೋಸಿಯೇಷನ್ನಿನ 4 ನೆ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿದ್ದ ಮೇಯರ್ ನಾರಾಯಣಶೆಟ್ಟರು, ಆಟೋಮೊಬೈಲ್ ಆವಶ್ಯ ವಸ್ತುಗಳ ಮೇಲೆ ಆಕ್ಟ್ರಾಯ್ ತೆಗೆಯಲು ಸಾಧ್ಯ ವಿಲ್ಲವೆಂದು ತಿಳಿಸಿದರು.

ಪೌರಸಭಾಧ್ಯಕ್ಷತೆ

ಮಂಗಳೂರು 25— ಮಂಗಳೂರು ಪೌರಸಭೆಯ ಅಧ್ಯಕ್ಷ ಚುನಾವಣೆಗೆ ಕಾಂಗ್ರೆಸ್ಸಿನ ಮಾನ್ಯೆ ಶ್ರೀನಿವಾಸ ನಾಯಕರು ಮತ್ತು ಸ್ವತಂತ್ರ ಡಾ || ಎಂ. ಸಿ. ಶಾಸ್ತ್ರಿಯವರು ಸ್ಪರ್ಧಿಸಿದ್ದರು — ಇಬ್ಬರಿಗೂ ಸಮವಾಗಿ 17 ಓಟುಗಳು ಬಂದಲು, ಅಧ್ಯಕ್ಷತೆ ವಹಿಸಿದ್ದ ಕುಂದಾಪುರದ ಅಸಿಸ್ಟೆಂಟು ಕಮಿಷನರ್ ಶ್ರೀ ವಿ ಎಂ ಕಾಮತರು ' ಲಾಟರಿ ' ತೆಗೆಯಲು ಶ್ರೀನಿವಾಸ ನಾಯಕರೇ ಅದೃಷ್ಟ ವಂತರಾಗಿ ಚುನಾಯಿತರಾದರು.

ರಂಗಾ ಉದ್ಘಾಟಿಸುವರು

[illegible]25— ಮಾರ್ಚ್ 1 ರಿಂದ [illegible]ವ ಅಖಿಲ ಮೈಸೂರು [illegible]ಪ್ರಮೇಳನವನ್ನು ಪಾರ್ಲಿ[illegible]ಪ್ರೊ || ಎಸ್ ಜಿ ರಂಗ[illegible]ರು ; ಪಾರ್ಲಿಮೆಂಟು ಸ[illegible]ಸಾವು ಮತ್ತು ಪ್ರೊ || [illegible]ಭಾಷಣ ಮಾಡುವರು.

ಶಾಲೆಯ ಪಂಚಾಂಗ

[illegible]ವಿದ್ವಾ ದೈವಜ್ಞ ಶಿಖಾಮಣಿ [illegible]ಷ್ಣ ಜೋಯಿಸರಿಂದ [illegible]ವಾರ ಪ್ರೌಢ — ಪಂಚಮಿ ಚಿತ್ರ

ಕಾಶಿ ವಿಶ್ವನಾಥ ದೇವಾಲಯದ ಬಿಡುಗಡೆ ದಿನಾಚರಣೆ

ವಾರಣಾಶಿ 25— ಮಾರ್ಚ್ ತಾ|| 7 ಶಿವರಾತ್ರಿ ದಿನದಂದು ' ಕಾಶಿ ವಿಶ್ವನಾಥ ದೇವಾಲಯದ ಬಂಧವಿಮೋಚನಾ ದಿನ ' ಆಚರಿಸಲಾಗುವುದೆಂದು ಅಖಿಲ ಭಾರತ ಹಿಂದೂಮಹಾಸಭೆಯ ಕಾರ್ಯದರ್ಶಿ ಶ್ರೀ ದೇಶಪಾಂಡೆ ನಿನ್ನೆ ಸೂಚಿಸಿರುವರು — ಮೊಗಲ ಚಕ್ರವರ್ತಿ ಔರಂಗಜೇಬರು ದೇವಾಲಯ ಒಡೆದು ಮಸೀದಿ ಕಟ್ಟಿದನೆಂದೂ, ದೇವಾಲಯವನ್ನು ಹಿಂದಕ್ಕೆ ಪಡೆಯಲು ಶಿವರಾತ್ರಿ ದಿನದಿಂದ ದೇಶದಾದ್ಯಂತ ಚಳುವಳಿ ಪ್ರಾರಂಭವಾಗುವುದೆಂದೂ ಅವರು ತಿಳಿಸಿರುವರು — ಆ ದಿನದಂದು ಉಪವಾಸ ಮತ್ತು ಹರತಾಳವನ್ನಾಚರಿಸಿ, ಶಿವದೇವರ ಮೆರವಣಿಗೆ ನಡೆಸಬೇಕೆಂದೂ ಸೂಚಿಸಿರುವರು.

ಕಸಿದು ಸತ್ತ ಸುದ್ದಿಗಾರ

ಬೊಂಬಾಯಿ 25— ನಾಗಪುರದ ಜಾನತಂತ್ರ ಮುಂತಾದ ವಾರಪತ್ರಿಕೆಯು ಸುದ್ದಿಗಾರ ಪೆಂಡ್ಸೆ ಬೊಂಬಾಯಿ ಬೊಂಬಾಯಿ ಶಾಸನಸಭೆಯಲ್ಲಿ ವಂದಿ ಬರೆದು ಕೊಳ್ಳುತ್ತಿದ್ದಾಗ ಕುರ್ಚಿಯಲ್ಲಿ ಕುಸಿದು ಸತ್ತುಹೋದರು.

ಮತ್ತೊಂದು ಶಾಸನ

ನವದೆಹಲಿ 25— ಹಿಂದೂ ಮತೀಯ ಸಂಸ್ಥೆಗಳು, ವ್ಯಕ್ತಿಗಳು ಮತ್ತು ದೇವಸ್ಥಾನಗಳಿಗೆ ಸಂಬಂಧಪಟ್ಟ ಒಂದು ಕೇಂದ್ರ ಶಾಸನವು ತಯಾರಿಸಲ್ಪಡುತ್ತಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಬಿಹಾರಿನಲ್ಲಿ ಮೊಕಾಮೆಘಾಟ್‌ನಲ್ಲಿ ಹೊಸದಾಗಿ ಕಟ್ಟಲಾಗಿರುವ ಗಂಗಾ ಸೇತುವೆ ಸೇತುವೆ ಮೇಲೆ ಮೊದಲದೇ ರೈಲು ಸೋಮವಾರ ಬಿಡಲ್ಪಟ್ಟಿತು.

ಇಂಗ್ಲೀಷು ಬದಲು ಉರ್ದು

ಲಾಹೋರು 25— 2 ದಿವಸಗಳು ನಡೆದ ಪಾಕಿಸ್ತಾನ ಉರ್ದು ಸಮ್ಮೇಳನದಲ್ಲಿ— ಪಶ್ಚಿಮ ಪಾಕಿಸ್ತಾನದಾದ್ಯಂತ ಇಂಗ್ಲೀಷಿನ ಬದಲು ಉರ್ದು ಭಾಷೆ ಪ್ರಸರಿಸಲು ಒಂದು ಪಾಂಚ ವಾರ್ಷಿಕ ಯೋಜನೆ ಜಾರಿಗೆ ತರಲು ನಿರ್ಧರಿಸಲಾಯಿತು.

ಸಾಂಕೇತಿಕ ಮುಷ್ಕರ

ಕೊಲಂಬೊ 24— ಪಬ್ಲಿಕ್ ಸೆಕ್ಯೂರಿಟಿ ಶಾಸನದ ರದ್ದಿಗೆ ಒತ್ತಾಯಿಸಿ ಕ್ಕಾಗಿ ಸಿಲೋನಿನ ಹನ್ನೆರಡು ದೊಡ್ಡ ಕಾರ್ಮಿಕ ಸಂಘಗಳು ಮಾರ್ಚ್ 3 ರಂದು ಸಾಂಕೇತಿಕ ಮುಷ್ಕರ ನಡೆಸಲಿವೆ — ಈ ಸಂಘಗಳಲ್ಲಿ 1 ಮಿಲಿಯ ಕಾರ್ಮಿಕರಿರುವರು.

ಬೆಂಗಳೂರು 25— ಶಾಸನ ಸಭೆಯು ತಾ | 28 ರಿಂದ ಏಪ್ರಿಲ್ 22 ರವರೆಗೆ ನಡೆಯುವುದು ; ಮಧ್ಯೆ ಯು ಗಾ ದಿ ಗೆ 1 ವಾರ ರಜಾ — ವಿಧಾನ ಪರಿಷತ್ತು ತಾ|| 28 ರಿಂದ ಪ್ರಾರಂಭವಾಗಿ ಮಾರ್ಚ್ 18 ರಿಂದ 10 ದಿನಗಳೂ, ಏಪ್ರಿಲ್ 5 ರಿಂದ 9 ದಿವಗಳು ರಜವನ್ನು ಹೊಂದಿರುವುದು.

ಕಲ್ಕತ್ತಾ 25 — ಬಂದರು ಕಾರ್ಮಿಕರ ಹತೋಟಿವಿಚಾರದ ಗುಂಪು ಜಗಳ ಸಲು ಪೋಲೀಸರು ಅಶ್ರುವಾಯು ಪ್ರಯೋಗಿಸಿದರು

ಅನಾಹುತ ತಪ್ಪಿತು

ಮೈಸೂರಿನಿಂದ ಕಳಿದ ರಾತ್ರಿ ಬೆಂಗಳೂರಿಗೆ ಹೊರಟ ರೈಲು ಲೋಕಪ್ಪಾವನಿ ಸೇತುವೆ ಬಳಿ ನಿಂತಿತೆಂದು ವರದಿ

ಸೇತುವೆ ಬಳಿ ರೈಲು ಹೋದಾಗ ಇಂಜಿನ್ ಡ್ರೈವರಿಗೆ ಬರುಗಿದ ಅನುಭವ ಆಗಿ ರೈಲು ನಿಲ್ಲಿಸಿದನಂದು, ಆ ವೇಳೆಗೆ 3 ಬೋಗಿಗಳು ಸೇತುವೆ ಮೇಲೆ ಇದ್ದವೆಂದು ವರದಿ

ಸೇತುವೆಯ ಕಬ್ಬಿಣದ ತೊಲೆಯೊಂದು ಕುಸಿದಿತ್ತೆಂದು ವರದಿ

ಸುದ್ದಿಗಳು

ಕಟಕ್ 25 — ಒರಿಸ್ಸಾದ ಮುಖ್ಯಮಂತ್ರಿ ಆಗಿ ಡಾ| ಹರೇಕೃಷ್ಣ ಮೆಹತಾಬರು ಮುಂದುವರಿಯುವ ವಿರುದ್ಧ ತಡೆ ಆಜ್ಞೆ ಕೊಡಬೇಕೆಂದು ಒರಿಸ್ಸಾ ಪ್ರಜಾ ಸೋಷಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ರಾಜಕೃಷ್ಣರಾಂ ಸಮಂತ್ರಿ ಹೈಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ

ಂ ಂ

ನವದೆಹಲಿ 25 — ಪಂ|| ಪಂತರವರು ಲೋಕಸಭೆಯಲ್ಲಿ ಹೇಳಿಕೆಯನ್ನಿತ್ತು, ಬೊಂಬಾಯಿನ ಸಲಹೆಯಂತೆ ಮೈಸೂರಿನ 4 ಜಿಲ್ಲೆಗಳಿಗೆ ಗಡಿ ತೊಂದರೆ ಆಗುವದೆಂದರು

ಂ ಂ

ಕರೀಂಗಂಜ್ 25 — ಕರೀಂಗಂಜಿನ ಜಂಪತಾ ಗ್ರಾಮಕ್ಕೆ ಪಾಕಿಸ್ತಾನ ಸೈನಿಕರು ಅಕ್ರಮವಾಗಿ ಪ್ರವೇಶಿಸಿ ಮನೆಯೊಂದನ್ನು ನಾಶ ಮಾಡಿದರು

ಂ ಂ

ನವದೆಹಲಿ 25 — 3 ವರೆ ವರ್ಷಗಳ ಶ್ರಮದಲ್ಲಿ, 1268 ಪುಟಗಳ ವರದಿಯನ್ನು ಆಕಮಿಷನ್ ಸಲ್ಲಿಸಿ ನಾಶ್ಕಿ ಯಾಧೀಶರ ಕೆಲಸಕ್ಕೆ ಜಾತಿವಾರು ಪರಿಗಣನೆ ಕೂಡದೆಂದಿದೆ

To

The Hon'ble Minister of Agriculture in Mysore,
Bangalore.

Respected Sir,

ನಮ್ಮ ಶೀಮೆಯಲ್ಲಿ ಇರುವ ದನಗಳ ಸಂಖ್ಯೆಗೂ ಜನಗಳ ಮತ್ತು ಸಾಗುವಳಿ ಆಗುವ ಜಮೀನುಗಳ ವಿಸ್ತೀರ್ಣವನ್ನು ಪರಿಶೀಲಿಸಿದಲ್ಲಿ (cattle) ದನಗಳ ಸಂಖ್ಯೆ ಬಹಳ ಕಡಮೆಯಾಗಿರುತ್ತೆ, ಜಿ ಂತಾ ಯಿ ಶ ಕ ಸ ಭಿ ನ ಜ ನ ರು (Agriculturists) ಮುದಿ ವೋಟು ಮತ್ತು ಗೊಡ್ಡು ರಾಸುಗಳ ಸಹಾಯದಿಂದ ಸುಗ್ಗೀ ಕಾಲದಲ್ಲಿ ಫಸಲು ರೇಜೆ ಮಾಡಲು ಮತ್ತು ಬಿಸಿಲು ಕಾಲದಲ್ಲಿ ಎಂಡು ಎಂಡು ಜೊತೆ ಇಂಥಾ ದನಗಳನ್ನು ಕಟ್ಟಿ ಜಮೀನು ಸಾಗುವಳಿಗಾಗಿ ಕಸಿಲೆ ಭಾವಿಗಳಿಂದ ನೀರು ಎತ್ತಿ ಹಾಯಿಸುವುದಕ್ಕೂ ಉಪಯೋಗಿಸಿ ಸಾಗುವಳಿ ಮಾಡುವುದು ಪದ್ಧತಿಯಾಗಿರುತ್ತೆ, ನಮ್ಮ cattle ಯಿಂದ ಉತ್ಕೃಷ್ಟವಾದ ಗೊಬ್ಬರ ಹಣದ ಖರ್ಚು ಇಲ್ಲದೆ ಸಿಗುತ್ತೆ. ಈ ಅಸಲೀ ಗೊಬ್ಬರದಿಂದ Food Production ಬಹಳ ಹೆಚ್ಚಾಗುತ್ತೆ ನಮ್ಮ ದೇಶದಿಂದ ಬಹಳ cattle ಹೊರಕ್ಕೆ ಹೋಗುತ್ತಾ ಇದೆ. ನಮ್ಮ ಶೀಮೆಯಿಂದ servicable and unservicale cattle ನಲ್ಲಿ ಹೊರದೇಶಗಳಿಗೆ ಹೋಗತಕ್ಕದ್ದನ್ನು ರದ್ದುಪಡಿಸಬೇಕಾಗಿಯೂ ಮತ್ತು ಸಂಕಾಂದವರ Permit ಇಲ್ಲದೆ ನಮ್ಮ ಸಂಸ್ಥಾನದಿಂದ ಯಾವ ಜಾತಿಯ cattle ನ್ನೂ ಹೊರಕ್ಕೆ ತೆಗೆದುಕೊಂಡು ಹೋಗಕೂಡದೆಂತ ಕಾನೂನು ಮಾಡಕಕ್ಕದ್ದು ಅತ್ಯವಶ್ಯಕವಾಗಿರುತ್ತೆ. ಭಗವಂತನ ದಯೆಯಿಂದ ನಮ್ಮ ಶೀಮೆಯಲ್ಲಿ ದನಗಳ ವೈವಿಗಾಗಿ ಹುಲ್ಲು ಬಹಳವಾವರುತ್ತೆ ನಮ್ಮ ಜಿಲ್ಲೆಯ ಕೆಲಸಗಾರರುಗಳಿಗೆ ದಯಮಾಡಿ ನಮ್ಮ ಜೀವನ ಆಧಾರವಾದ ವೈಕ್ಯಂಡ ಸಹಾಯ ಮಾಡಿ ನಮ್ಮಗಳನ್ನು ಕಾಪಾಡುತ್ತೀರೆಂದು ಪಾರ್ಥಿಸುತ್ತೇವೆ.

ತಮ್ಮ ವಿಧೇಯರು

Mysore
24th Feb. 1959

ಪಟೇಲ ಮಾದಪ್ಪ
ಮಾದಾಪುರ Agriculturist
T. Narasipur Taluk

ಇನ್ನೂ ಕೆಲವರ ಹೆಸರುಗಳಿವೆ

ಜಿರಾಯಿತ ಕಸುಬಿನವರಿಗೆ ಸೂಚನೆ

ನೀವು ತಮ್ಮಗಳ ಜಮೀನು ಇರುವ ಸ್ಥಳಕ್ಕೆ ಸುಮಾರು 2–3 ಮೈಲಿಗಳ ಸಮೀಪದಲ್ಲಿ ವಾಸವಾಗಿದ್ದುಕೊಂಡು ಸಾಗುವಳಿ ಉಸ್ತುವಾರಿ ಚೆನ್ನಾಗಿ ಮಾಡುವಕಶ್ಟ ಇದ್ದಲ್ಲಿ ತಮ್ಮಗಳಿಗೆ ಈಗ ಸಾಗುವಳಿಯಲ್ಲಿ ಬರುತ್ತಾಯಿರುವ ವರಮಾನಕ್ಕಿಂತ 2–3 ಪಟ್ಟು ಹೆಚ್ಚಾಗಿ ಸಿಕ್ಕುತ್ತೆ, ಮತ್ತು ನಿಮ್ಮ (cattle) ದನಗಳು ಒಳ್ಳೇ ಸ್ಥಿತಿಯಲ್ಲಿ ಇರುತ್ತೆ. ಇದು ನನ್ನ ಅನುಭವ, ತಮಗೆ ಸೂಚಿಸಿರುತ್ತೇನೆ.

ಪಟೇಲ್ ಮಾದಪ್ಪ, T. Narasipur.

ವುಡ್‌ಲ್ಯಾಂಡ್ಸ್ ಕೀರ್ತಿಯುತ 4ನೇ ವಾರ

.... ಸಹಸ್ರಾರು ಮಂದಿ ನೋಡಿ ಆನಂದಿಸುತ್ತಿರುವ ಚಿತ್ರರತ್ನ ....

ದಿಲ್ಲೀ – ಕ – ಥಗ್ (ಹಿಂದಿ)

ಶಾರಾಗಣ - ನೂತನ್, ಕಿಶೋರ್, ಸ್ಮೃತಿಬಿಸ್ವಾಸ್ | ದಿನ 3 ಪ್ರದರ್ಶನಗಳು

ಅಪೆರಾ— 24–2–59 ರಿಂದ

ಮಹೋನ್ನತ ತಮಿಳು ಚಿತ್ರ — — ಪ್ರತಿದಿನ 3 ಆಟಗಳು

ಗೌರಿ ಮಹಾತ್ಮೆ

ಶಾರಾಗಣ— ಎಸ್ ಟಿ ರಂಗಸ್ವಾಮಿ, ರೇಲಂಗಿ, ಶ್ರೀರಂಜನಿ, ಸೂರ್ಯಕಲಾ

ಸರ್ವೋದಯತತ್ವ

(ಮುಂದುವರಿದುದು)

ದೊಡ್ಡವರಾರಾದರೂ ಹೊರಗಿನಿಂದ ಬಂದಾಗ ಅವರಿಗೆ ಅದ್ಭುತ ಸ್ವಾಗತ ನೀವುದು ನಮ್ಮ ಸ್ವಭಾವ ; ಒಂದು ಗ್ರಾಮದಲ್ಲಿ ಅಥವಾ ಒಂದು ಪಟ್ಟಣದಲ್ಲಿ ಪ್ರಸಿದ್ಧರಾದ ಕೆಲವರು ಮುಂದಾಳುಗಳು ಎಲ್ಲ ಕಾರ್ಯಕ್ರಮಗಳಿಗೂ ಸಿದ್ಧರಾಗುವರು ; ಪರಸ್ಪರ ಧ್ಯೇಯದಲ್ಲಿ ವಿರುದ್ಧಗಳಾದ ಸಂಸ್ಥೆಗಳ ಮುಂದಾಳುಗಳು ತಮ್ಮ ತಮ್ಮ ತತ್ವಪ್ರಚಾರಕ್ಕಾಗಿ ಬಂದಾಗ ಒಂದೇ ಸ್ವಾಗತ ಸಮಿತಿಯೇ ಎಲ್ಲ ಮುಂದಾಳುಗಳನ್ನು ಸ್ವಾಗತಿಸುವುದು ; ಒಂದೇ ವೇದಿಕೆಯಲ್ಲಿಯೇ ಖಾದಿ ಟೋಪಿ, ಆರ್ ಎಸ್ ಎಸ್ ಟೋಪಿ, ಹಿಂದೂಮಹಾಸಭೆ ಟೋಪಿಗಳು ಇಡಲ್ಪಟ್ಟಿದ್ದು ಸಮಯಕ್ಕೆ ತಕ್ಕಂತೆ ತಿರೋಧೂಷಣವಾಗುವುವು.

ನಮ್ಮಲ್ಲಿ ಹೊರಗಿನ ನಾಟಕೀಯ ವ್ಯವಹಾರವೇ ಎದ್ದು ಕಾಣುವುದು ; ದೇಶಾಭಿಮಾನವಾಗಲೀ, ರಾಜಕೀಯ ತತ್ವನಿಷ್ಠೆಯಾಗಲೀ ನಮ್ಮಲ್ಲಿಲ್ಲ ; ಜಾತೀಯತೆ ತುಂಬಿತುಳುಕುತ್ತಿರುವ ಈ ನಮ್ಮ ರಾಜಕೀಯ ವ್ಯವಹಾರದಲ್ಲಿ ಬುದ್ಧಾರಿಗಳು ಇತರರಿಗೆ ಉಪದೇಶ ಮಾಡುವುದಕ್ಕೆ ಮಾತ್ರ ಸರ್ವೋದಯ, ಕಾಂಗ್ರೆಸ್, ಸೋಷಿಯಲಿಸ್ಟ್, ಕಮ್ಯೂನಿಸ್ಟ್ ಎಂಬ ಶಬ್ದಗಳನ್ನು ಉಚ್ಚರಿಸುತ್ತಿರುವವರೇ ಹೊರತು ಶುದ್ಧಾಂತಃಕರಣದಿಂದ ಗಾಂಧೀಜೀ, ವಿನೋಬಾರವರು ಉಪದೇಶದಂತೆ ನಡೆಯಲು ಸಿದ್ಧರಾಗಿಲ್ಲ ; ಇಳುವಾಲದಲ್ಲಿ ನಡೆದ ಸಮ್ಮೇಳನಕ್ಕೆ ಎಲ್ಲ ರಾಜಕೀಯ ಮುಖಂಡರು ಬಂದಿದ್ದುದು ನಿಜ ; ಆದರೆ ತತ್ವಸಮಾಧಾನದಲ್ಲಿ ದೇಶವು ಎಷ್ಟರಮಟ್ಟಿಗೆ ಮುಂದುವರಿದಿರುವುದೆಂಬುದು ವಿಚಾರಣೀಯ.

ಈಗಿನ ಕಾರ್ಮಿಕ ಪ್ರಪಂಚದಲ್ಲಿ ಎಲ್ಲ ದೇಶಗಳಲ್ಲಿಯೂ ಸಮಾಜ ಸುಧಾರಣಾ ಆಂದೋಳನವೆದ್ದಿದೆ : ಧನಿಕ, ದರಿದ್ರ ಇವರುಗಳ ಮಧ್ಯದ ಅಂತರವನ್ನು ಕಡಮೆ ಮಾಡುವ ಪ್ರಯತ್ನಗಳು ವಿವಿಧ ರೀತಿಯಲ್ಲಿ ಸಾಗಿವೆ ; ಈ ಸಮಾಜ ಕ್ರಾಂತಿಯು ಪ್ರಪಂಚದ ವಿಚಾರಶೀಲ ಮನಸ್ಸನ್ನು ಎಳೆದಿಡೆ ಮೆಲ್ಲಮೆಲ್ಲಗೆ ಜಗತ್ತು ರಷ್ಯದ ಸಮಾಜಕ್ರಾಂತಿಯ ಕಡೆಗೆ ಒಲಯುವಂತೆ ಕಾಣುತ್ತಿದೆ.

[ಸೇ. ಸ]

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ



ಗೋರಕ್ಷಣ ಪತ್ರಿಕೆಗೆ ಜೈ ಬಲಿಗರಾ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ಮತ್ತು

ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ ಅಂಚೆವೆ

ಪೋಷಕರು ರೂ 25, ಬೆಂಬಲಿಗರು ರೂ 10 (ಹೊರದೇಶ

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖ

ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು

Advertise in Goraksana and help the pion

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ,

Edited, Printed & Published by Dharma Prakash K
Krishna Rao. at the Satyavadi Press Chamarajapuram